**ಪ್ರಮಾಣೀಕರಿಸಲಾದ ದಿನಾಂಕಃ– 11.02.2026.**

**ಮುಂದುವರೆದ ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಶ್ರೀ. ಎನ್. ಪಿ. ಎಂ. ವಕೀಲರಿಂದಃ**

ನಿ.ಡಿ. 18 ಮತ್ತು 19 : CMC 2/2015 ಮತ್ತು CMC 1/2016 ರ ಆದೇಶದ ದೃಢೀಕೃತ ನಕಲುಗಳು

**ಮುಂದುವರಿದ ಪಾಟೀ ಸವಾಲುಃ ವಾದಿ ಪರ ಶ್ರೀ ಸಿ ಹೆಚ್ ಇ ವಕೀಲರಿಂದ ಃ –**

ಸಾಕ್ಷಿಗೆ ವಾದಿ ಮತ್ತು ಪ್ರತಿವಾದಿಯವರ ಮನೆಯಿರುವ ಒಂದು ಫೋಟೋ ತೋರಿಸಿ ನೋಡಿ ಒಪ್ಪಿದ್ದು ಅದನ್ನು ನಿ ಪಿ 6 ಎಂದು ಗುರುತಿಸಲಾಯಿತು. ಈ ಎರಡು ಮನೆಗಳ ನಡುವೆ ನನ್ನ ಮನೆಯ ಗೇಟು ಕಾಣುತ್ತಿರುವವರೆಗೂ ಮನೆ ಇತ್ತು, ಆದರೆ ಹಳೆಯ ಫೋಟೋ ಇಲ್ಲ. ನಿ ಪಿ 6 ರಲ್ಲಿ ಕಾಣುತ್ತಿರುವ ಪ್ರತಿವಾಯ ಜಾಗದಲ್ಲಿರುವ ಗೇಟ್ ಆಗ ಹಿಂದೆ ಮನೆಯ ಗೋಡೆಗೆ ಲಗತ್ತಾಗಿ fix ಮಾಡಲಾಗಿತ್ತು ಎಂದರೆ ಸರಿ. ವಾದಿಯ ಮನೆ ತುಂಬಾ ಹಳೆ ಮನೆ ಎಂರದೆ ಸರಿ. ವಾದಿಯ ಮನೆಯ ಕಾಂಪೌಂಡ್ ಗೋಡೆಯ ಪಕ್ಕದಲ್ಲಿ 2 ವರೆ ಅಡಿಯ ಓಡಾಡುವ ಓಣಿ ಇದೆ ಎಂದರೆ ಸರಿ. ಸಾಕ್ಷಿಗೆ ಇನ್ನೊಂದು ಫೋಟೋ ತೋರಿಸಿದ್ದು ಈ ಓಣಿಯ ಮೂಲಕ ಹೋದರೆ ಹಿಂಭಾಗದ ಗೇಟ್ ಸಿಗುತ್ತದೆ ಎಂದರೆ ಸರಿ. ಆ ಫೋಟೋವನ್ನು ನಿ ಪಿ 7 ಎಂದು ಗುರುತಿಸಲಾಯಿತು. ಇನ್ನೊಂದು ಫೋಟೋ ತೋರಿಸಿದ್ದು ಅದು ಹಿಂಭಾಗದ ಜಾಗದಲ್ಲಿ ವಾದಿಗೆ ಸೇರಿದ ಶೆಡ್‌ಗಳಿದ್ದು ಅದರ ಹಿಂದೆ ಕಾಫಿ ತೋಟ ಇದೆ ಎಂದರೆ ಸರಿ, ಆ ಫೋಟೋವನ್ನು ನಿ ಪಿ 8 ಎಂದು ಗುರುತಿಸಲಾಯಿತು. ನಿ ಪಿ 8 ರಲ್ಲಿ ಕಾಣುತ್ತಿರುವ ಜಾಗ ಬಾಡಿಗೆಗೆ ಕೊಟ್ಟಿದ್ದರು ಎಂದರೆ ಗೊತ್ತಿಲ್ಲ. ವಾದಿಯ ಬಾಡಿಗೆದಾರರು ನಿಪಿ 7 ಗೇಟ್ ಮೂಲಕ ನಿ ಪಿ 6 ರಲ್ಲಿ ಕಾಣುತ್ತಿರುವ ಓಣಿಯ ಮೂಲಕ ಹೋಗುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ, ಓಣಿ ನನ್ನ ಜಾಗವಾಗಿರತ್ತುದೆ. ಓಣಿ ನಮ್ಮ ಜಾಗದಲ್ಲಿ ಬರುತ್ತದೆಂದು ನನ್ನ ಲಿಖಿತ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿ. ಸಾಕ್ಷಿಗೆ ಇನ್ನೊಂದು ಫೋಟೋ ತೋರಿಸಿದ್ದು ಆ ಗೇಟ್ ಸಾಕ್ಷಿ ಹಾಕಿದ ಗೇಟ್ ಎಂದು ಒಪ್ಪಿದ್ದು ಅದು ನನ್ನ ಜಾಗದಲ್ಲಿ ಇದೆ ವಾದಿಯ ಜಾಗದಲ್ಲಿ ಇಲ್ಲ ಎಂದರೆ ಸರಿ, ಅದನ್ನು ನಿ ಪಿ 9 ಎಂದು ಗುರುತಿಸಲಾಯಿತು.

ನಿ ಪಿ 6 ರಲ್ಲಿ ಕಾಣಿಸುತ್ತಿರು ಮನೆಯ ವಿಸ್ತೀರ್ಣ ಅಂದಾಜು ಓಣಿ ಬಿಟ್ಟು ಅಗಲ 28 ಅಡಿ ಇರಬಹುದು. ನಿ ಡಿ 10ಕ್ರಯಪತ್ರದಲ್ಲಿ ನಿಪಿ 6 ರಲ್ಲಿ ಮುಂದೆ ಕಾಣುತ್ತಿರುವ ವಿಸ್ತೀರ್ಣ 20 ಅಡಿಗಳಿದ್ದು ಮಣ್ಣಿನ ಗೋಡೆ ಮನೆ ಎಂದು ಬರೆಯಲಾಗಿದೆ ಎಂದರೆ ಅಂದಾಜಿನಂತೆ ಬರೆದಿರುತ್ತಾರೆ. ನಿ ಡಿ 10 ರಲ್ಲಿ ಅಳತೆ ಮಾಡಿ ನಿಖರವಾಗಿ ಮನೆಯ ವಿಸ್ತೀರ್ಣ ಬರೆಯಲಾಗಿದೆ ಎಂದರೆ ಸರಿಯಲ್ಲ. ವಾದಪತ್ರದಲ್ಲಿ 2 ಶೆಡ್ಯೂಲ್‌ಗಳು ಇದೆ ಎಂದರೆ ಸರಿ. ಬಿ ಶೆಡ್ಯೂಲ್ ದಾವಾಸ್ತಿಯು ಎ ಶೆಡ್ಯೂಲ್ ದಾವಾಸ್ತಿಯಲ್ಲಿ ಒಳಗೊಂಡಿದೆ ಎಂದರೆ ಸರಿ. ಈ ದಾವೆಯಲ್ಲಿ ತಾತ್ಕಲಿಕವಾಗಿ ಎ ಶೆಡ್ಯೂಲ್ ನಲ್ಲಿ ಓಡಾಡಲು ಅಡ್ಡಿಪಡಿಸಬಾರದೆಂದು ಆದೇಶವಾಗಿದೆ ಎಂದರೆ ಸರಿ. ತಾತ್ಕಲಿಕ ಆದೇಶವನ್ನು ಪ್ರಶ್ನಿಸಿರುವುದಿಲ್ಲ ಎಂದರೆ ಸರಿ.

ನಾನು ಆಸ್ತಿ 1993 ರಲ್ಲಿ ಖರೀದಿಸುವ ಮುನ್ನ Private Survey ಮಾಡಿಸಿರುತ್ತೇವೆ, ಅದರ ದಾಖಲೆ ಇಲ್ಲ. ನಿ ಪಿ 6 ರಲ್ಲಿ ನಾನು ಹಿಂದೆ ಕಟ್ಟಿರುವ ಮನೆ ಜಾಗದಲ್ಲಿ ಮೊದಲು ಬಾವಿ ಇತ್ತು ಎಂದರೆ ಸರಿಯಲ್ಲ, 2014 ರಲ್ಲಿ ನಾನು ತೆಗೆಸಿರುತ್ತೇನೆ. ಹಿಂದೆ ಮನೆ ಕಟ್ಟಿಸುವ ಮೊದಲು ವಾದಿ ಮತ್ತು ನಮ್ಮಗಳ ಆಸ್ತಿಗಳ ನಡುವೆ ತಂತಿ ಬೇಲಿ ಇತ್ತು ಎಂದರೆ ಸರಿ. ತಂತಿ ಬೇಲಿ ಈಗ ಇರುವುದಿಲ್ಲ ಎಂದರೆ ಸರಿಯಲ್ಲ, ಆ ಬೇಲಿಯಿಂದ ಒಂದು ಅಡಿ ಬಿಟ್ಟು ಕಾಂಪೌಂಡ್ ಹಾಕಿಕೊಂಡಿರುತ್ತೇವೆ. 2016-2017 ರಲ್ಲಿ ಈ ಕಾಂಪೌಂಡ್ ಕಟ್ಟಿರಬಹುದು. ಎ ಶೆಡ್ಯೂಲ್ ನಲ್ಲಿ ಮನೆ ಕಟ್ಟುವ ಕಾಲದಲ್ಲಿ ಯಾರು ವಾದಿಯನ್ನು ಅಡ್ಡಿಪಡಿಸಬಾರದೆಂದು ತಾತ್ಕಲಿಕ ಆದೇಶವಿತ್ತು ಎಂದರೆ ಸರಿ. ನಿ ಡಿ 2 ಮತ್ತು 3 ಫೋಟೋದಲ್ಲಿ ನಾನು ಬೇಲಿಯನ್ನು ಕೀಳುತ್ತಿದ್ದೇನೆ ಎಂದರೆ ಸರಿಯಲ್ಲ, ಬೇಲಿಯಿಂದ ಒಂದು ಅಡಿ ಬಿಟ್ಟು ಕಾಂಪೌಂಡ್ ಹಾಕುತ್ತಿದ್ದೇನೆ. ಸಾಕ್ಷಿಗೆ ಇನ್ನೊಂದು ಫೋಟೋ ತೋರಿಸಿದ್ದು ಅದನ್ನು ನೋಡಿ ಗುರುತಿಸಿದ್ದು ನಿಪಿ 10 ಎಂದು ಗುರುತಿಸಲಾಯಿತು. ಹಿಂದೆ ಇದ್ದಂತಹ ಬೇಲಿ ಕಾಣುತ್ತಿಲ್ಲ ಎಂದರೆ ಸರಿ. ವಾದಿಯವರೇ ಅದನ್ನು ತೆಗೆದು ಹಾಕಿದ್ದು ಅವರ ಮೇಲೆ ಪೊಲೀಸ್ ದೂರು ಇರುತ್ತದೆ. ವಾದಿ ಆ ರೀತಿ ಬೇಲಿ ಕಿತ್ತುರುವುದಿಲ್ಲ, ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪೊಲೀಸ್‌ಗೆ ಕೊಟ್ಟ ದೂರನ್ನು ಉಳಿಸಿಕೊಂಡಿರುವುದಿಲ್ಲ, ಹಿಂಬರಹವನ್ನು ಮಾತ್ರ ಕೊಟ್ಟಿರುತ್ತೇನೆ. ನಿ ಡಿ 14 ಪೊಲೀಸ್ ಹಿಂಬರಹದಲ್ಲಿ ವಾದಿಯು ಬೇಲಿಯನ್ನು ಕಿತ್ತು ಹಾಕಿರುವ ಬಗ್ಗೆ ಉಲ್ಲೇಖವಿಲ್ಲ ಎಂದರೆ ಸರಿಯಲ್ಲ. ನಿ ಪಿ 10 ರಲ್ಲಿ ಚರಂಡಿ ಕಾಣುತ್ತಿಲ್ಲ ಎಂದರೆ ಸರಿ, ಆದರೆ ಬೇಲಿಯ ದೂರು ಕೊಟ್ಟಾಗ ಚರಂಡಿ ಇತ್ತು. ಬೇಲಿಯು ಕಿತ್ತು ಹಾಕಿಲ್ಲ, ಅಲ್ಲಿ ಚರಂಡಿಯೂ ಇಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಿಡಿಯೋ ಮೂಲಕ Court commission ಆಗಬೇಕೆಂದು ಆದೇಶವಾಗಿದ್ದು  ಅದರಂತೆ ಮಾಡಿದ್ದಾರೆ ಎಂದರೆ ಸರಿ. ಆ ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ 11 ರಿಂದ 24 ಎಂದು ಗುರುತಿಸಲಾಯಿತು. ಕಮಿಷನರ್ ವರದಿಯನ್ನು ನಾನು ತಿಳಿದುಕೊಂಡಿಲ್ಲ. ಆ ವರದಿಯಂತೆ ನಾವು ಒತ್ತುವರಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಒತ್ತುವರಿ ಆದ ವಿಚಾರ ಗೊತ್ತಿದ್ದರೂ ಗೊತ್ತಿಲ್ಲ ಎಂದು  ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿ 2014 ರಲ್ಲಿ ಹದ್ ಬಸ್ತ್ ಮಾಡಿಸಲು ತಾಲ್ಲೂಕು ಸರ್ವೆಯರ್ ಗೆ ಅರ್ಜಿ ಕೊಟ್ಟಿದ್ದರು ಎಂದರೆ ಸರಿ. ನಿ ಡಿ 5 ನೋಟೀಸ್ ಅನ್ನು ನೋಡಿ ಗುರುತಿಸಿರುತ್ತಾರೆ. ಆ ಹದ್ ಬಸ್ತ್ ನಲ್ಲಿ ನನ್ನ ಮತ್ತು ವಾದಿ ಸಹಿ ಪಡೆದರು ಎಂದರೆ ಸರಿ. ನಂತರ ಹದ್ ಬಸ್ತ್ ಸರಿಯಾಗಿ ಆಗುತ್ತಿಲ್ಲ ಎಂದು ಸರ್ವೆ ಮುಂದುವರೆಸಲಿಲ್ಲ ಎಂದರೆ ಸರಿಯಲ್ಲ. ಆ ದಿನ ಹದ್ ಬಸ್ತ್ ಪೂರ್ಣ ಗೊಳ್ಳಲಿಲ್ಲ ಎಂದರೆ ಸರಿಯಲ್ಲ. ನಿ ಡಿ 17 ರಲ್ಲಿ ನನ್ನ ಮತ್ತು ವಾದಿಯ ಸಹಿ ಇಲ್ಲ. ನಿ ಡಿ 17 ರಲ್ಲಿ ಯಾರು ಸರ್ವೆ ಮಾಡಿ ಸ್ಕೆಚ್ ತಯಾರಿಸಿದ್ದರು ಎಂದು ಸೀಲು ಮತ್ತು ಸಹಿ ಇಲ್ಲ ಎಂದರೆ, ಆ ದಾಖಲೆಗೆ ಸೀಲು ಸಹಿ ಬೇಕಾಗಿಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**sd/-**

ಸಿವಿಲ್ ನ್ಯಾಯಾಧೀಶರು

ಮತ್ತು ಪ್ರದನ್ಯಾದಂ., ಪೊನ್ನಂಪೇಟೆ